ದಿನಾಂಕಃ 21-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ- ವಾದಿ ಪರಃ ಶ್ರೀ ಕೆ.ಸಿ.ಕೆ. ವಕೀಲರಿಂದಃ-

ವಾದಿ ಈ ದಾವೆಯನ್ನ ದಾವಾ ಸ್ವತ್ತುಗಳಲ್ಲಿ ವಿಭಾಗ ಕೋರಿ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ಸೇರ್ಪಡೆ ಮಾಡಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ದಾಸರಹಳ್ಳಿ ಗ್ರಾಮ ಸರ್ವೆ ನಂ.67 ನ್ನ ಹೊರತುಪಡಿಸಿ ಉಳಿದೆಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ. ದಾಸರಹಳ್ಳಿ ಗ್ರಾಮ ಸರ್ವೆ ನಂ.67 ರ ಆಸ್ತಿಯನ್ನ ನನ್ನ ಹೆಂಡತಿಯ ಸಹೋದರರು ಪಾಲು ಕೊಟ್ಟು ಆಕೆ ಹೆಸರಿಗೆ ಮಾಡಿಕೊಟ್ಟಿದ್ದಾರೆ ಎನ್ನುತ್ತಾರೆ. ದಾಸರಹಳ್ಳಿ ಗ್ರಾಮ ಸರ್ವೆ ನಂ.67 ರಲ್ಲಿ ಒಟ್ಟು 4 ಎಕರೆ 23 ಗುಂಟೆ ವಿಸ್ತೀರ್ಣ ಇದ್ದು ಆ ಪೈಕಿ 14 ಗುಂಟೆ ಕರಾರು ಇದೆ ಎಂದರೆ ಸರಿ. ನನಗೆ ಮತ್ತು ನನ್ನ ಕುಟುಂಬಸ್ಥರಿಗೆ ವ್ಯವಸಾಯ ಮಾತ್ರ ಆದಾಯದ ಮೂಲ ಎಂದರೆ ಸರಿ. ನನ್ನ ಕುಟುಂಬದ ಪೂರ್ವಜರಿಗೂ ಸಹ ವ್ಯವಸಾಯದಿಂದ ಬರುತ್ತಿದ್ದ ಆದಾಯ ಮೂಲ ಆದಾಯ ಆಗಿತ್ತು ಎಂದರೆ ಸರಿ. ನನ್ನ ವಿವಾಹ ನನ್ನ 27 ನೇ ವಯಸ್ಸಿನಲ್ಲಿ ಇದೆ. ನನ್ನ ವಿವಾಹ ಕಾಲಕ್ಕೆ ನನ್ನ ಪತ್ನಿಗೆ ಸುಮಾರು 22 ವರ್ಷ ವಯಸ್ಸಾಗಿತ್ತು. ಯಾವ ವರ್ಷದಲ್ಲಿ ನನ್ನ ವಿವಾಹವಾಗಿದೆ ಎಂದು ನೆನಪಿಲ್ಲ. ಹಾಲಿ ನನಗೆ 85 ವರ್ಷ ವಯಸ್ಸು. ನನ್ನ ಜನ್ಮ ದಿನಾಂಕದ ಬಗ್ಗೆ ಯಾವುದೇ ದಾಖಲೆ ಇಲ್ಲ. ನನ್ನ ಮತ್ತು 7 ನೇ ಪ್ರತಿವಾದಿ ವಿವಾಹವಾದ ನಂತರ ನಮ್ಮ ಒಟ್ಟು ಕುಟುಂಬದ ಆದಾಯದ ಮೇಲೆ ಜೀವನ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ಪತ್ನಿಗೆ ಸ್ವಂತ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ಮೈಸೂರು ಕಾಫಿ ಕ್ಯೂರಿಂಗ್ ನಲ್ಲಿ ಕೂಲಿ

ಮಾಡುತ್ತಿದ್ದರು ಎನ್ನುತ್ತಾರೆ. ಮೈಸೂರು ಕಾಫಿ ಕ್ಯೂರಿಂಗ್ ನಲ್ಲಿ ಕೆಲಸ ಮಾಡಿದರೆ ಕಾರ್ಮಿಕರ ಹಾಜರಾತಿ ಪುಸ್ತಕವನ್ನ ಇಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಸಂಸ್ಥೆಯಲ್ಲಿ ಕೂಲಿ ಕಾರ್ಮಿಕರಿಗೆ ಸಂಬಳ ಕೊಟ್ಟ ಬಗ್ಗೆ ವಹಿಯಲ್ಲಿ ಸಹಿ ಪಡೆಯುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಪತ್ನಿ ಮೈಸೂರು ಕಾಫಿ ಕ್ಯೂರಿಂಗ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. 1985 ರಲ್ಲಿ ನನ್ನ ಪತ್ನಿಗೆ ಐಟಂ ನಂ.5 ರ ಸ್ವತ್ತನ್ನ ಭಾಗ ಕೊಡಲಾಗಿದೆ. ಸದರಿ ಸ್ವತ್ತನ್ನ ನನ್ನ ಪತ್ನಿಗೆ ಭಾಗ ಕೊಟ್ಟಿದ್ದರ ಸಂಬಂಧ ಯಾವುದೇ ದಾಖಲೆ ಇಲ್ಲ. ಸಾಕ್ಷಿ ಮುಂದುವರಿದು ನನ್ನ ಬಳಿ ಯಾವುದೇ ಹಣ ಇರಲಿಲ್ಲ, ನನ್ನ ಪತ್ನಿಯ ಸಹೋದರರು ಅದನ್ನ ಆಕೆಗೆ ಖರೀದಿ ಮಾಡಿಕೊಟ್ಟರು ಎನ್ನುತ್ತಾರೆ. ನನ್ನ ಪತ್ನಿ ಹೆಸರಿಗೆ ಅವರ ಸಹೋದರರು ದಾವಾ ಐಟಂ ನಂ.5 ರ ಆಸ್ತಿಯನ್ನ ಖರೀದಿ ಪತ್ರದ ಮುಖಾಂತರ ಕೊಟ್ಟಿರುತ್ತಾರೆ. ಖರೀದಿ ಪ್ರತಿಫಲವನ್ನ ಯಾರು ಪಾವತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ.5 ರ ಆಸ್ತಿ ಸಂಬಂಧ ಆದ ಖರೀದಿ ವ್ಯವಹಾರದ ಕಾಲಕ್ಕೆ ನನ್ನ ಪತ್ನಿ ಬಳಿ ಯಾವುದೇ ಹಣ ಇರಲಿಲ್ಲ. ಸಾಕ್ಷಿ ಮುಂದುವರಿದು ಪಿತ್ರಾರ್ಜಿತ ಆಸ್ತಿಯಲ್ಲಿ ಬರುತ್ತಿದ್ದ ಉತ್ಪನ್ನ ಜೀವನಕ್ಕೆ ಸಾಕಾಗುತ್ತಿರಲಿಲ್ಲ ಆದ್ದರಿಂದ ನಾನು ಮತ್ತು ನನ್ನ ಪತ್ನಿ ಕೂಲಿ ಮಾಡುತ್ತಿದ್ದೆವು ಎನ್ನುತ್ತಾರೆ. ಜಮೀನಿನಿಂದ ಬರುತ್ತಿದ್ದ ಆದಾಯ ಮತ್ತು ನಮ್ಮ ಕೂಲಿ ಆದಾಯ ಜೀವನ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿ. ಪಿತ್ರಾರ್ಜಿತವಾಗಿ ಬಂದ ಆಸ್ತಿಯಲ್ಲಿ ರಾಗಿ, ಜೋಳ, ಮೆಣಸಿನಕಾಯಿ ಬೆಳೆ ಬೆಳೆಯುತ್ತಿದ್ದೆವು. ಎಲ್ಲಾ ದಾವಾ ಆಸ್ತಿಗಳನ್ನ

ನಾನು ಮತ್ತು ನನ್ನ ಕುಟುಂಬಸ್ಥರು ಸೇರಿ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದೆವು. ದಾವಾ ಸ್ವತ್ತುಗಳನ್ನ ನೀವು ಮತ್ತು ನಿಮ್ಮ ಮಕ್ಕಳು ಸೇರಿ ಸಾಗುವಳಿ ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ವಾದಿಯನ್ನ 10 ನೇ ತರಗತಿಯವರೆಗೆ ಓದಿಸಿದೆ ಆತ ಮನೆ ಬಿಟ್ಟು ಓಡಿ ಹೋದ ಮತ್ತು ಉಳಿದವರು ಸೇರಿ ವ್ಯವಸಾಯ ಮಾಡುತ್ತಿದ್ದೆವು ಎನ್ನುತ್ತಾರೆ. ಪ್ರತಿಯೊಂದು ದಾವಾ ಸ್ವತ್ತುಗಳ ಖರ್ಚಿನ ಸಂಬಂಧ ಪ್ರತ್ಯೇಕ ಲೆಕ್ಕವನ್ನ ಇಟ್ಟಿರಲಿಲ್ಲ, ಸದರಿ ಸ್ವತ್ತುಗಳಿಗೆ ಒಟ್ಟಾಗಿ ಖರ್ಚು ಮಾಡುತ್ತಿದ್ದೆವು. ನಿಮ್ಮ ಕುಟುಂಬದ ಆಸ್ತಿ ಸಂಬಂಧ ಕೂಲಿ ಆಳುಗಳನ್ನ ಕರೆದುಕೊಳ್ಳುತ್ತಿದ್ದಿರಾ ಎಂದರೆ ಸಾಕ್ಷಿ ಸ್ವಲ್ಪ ಸ್ವಲ್ಪ ಜನಗಳನ್ನ ಕರೆದುಕೊಳ್ಳುತ್ತಿದ್ದೆವು ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ ಹಾಲಿ ಏನೇನು ಬೆಳೆ ಇದೆ ಎಂದರೆ ಸಾಕ್ಷಿ ನನ್ನ ಮಕ್ಕಳಿಗೆ ಆಸ್ತಿಯನ್ನ ಹಂಚಿಕೊಟ್ಟಿದ್ದೇನೆ ಮತ್ತು ವಾದಿ ಸರ್ವೆ ನಂ.41 ಮತ್ತು 13 ರಲ್ಲಿ ಬಂದಿರುವ ಆಸ್ತಿಯನ್ನ ಭೋಗ್ಯಕ್ಕೆ ಕೊಟ್ಟಿಕೊಂಡಿರುತ್ತಾನೆ ಎನ್ನುತ್ತಾರೆ. ವಾದಿಗೆ ಸದರಿ ಸರ್ವೆ ನಂಬರ್ ನ ಆಸ್ತಿಗಳಲ್ಲಿ ಎಷ್ಟೆಷ್ಟು ಆಸ್ತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಸರ್ವೆ ನಂ.41 ರಲ್ಲಿ ಇಬ್ಬರಿಗೆ ಹಂಚಿಕೊಟ್ಟಿದ್ದೇನೆ ಮತ್ತು ಸರ್ವೆ ನಂ.13/2 ರ ಪೂರ್ತಿ ಆಸ್ತಿಯನ್ನ ವಾದಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಸರ್ವೆ ನಂ.41 ರ 1 ಎಕರೆ 37 ಗುಂಟೆಯನ್ನ ವಾದಿ ಮತ್ತು 3 ನೇ ಪ್ರತಿವಾದಿ ತಮ್ಮೇಗೌಡರವರಿಗೆ ಸಮನಾಗಿ ಹಂಚಿಕೊಡಲಾಗಿದೆ. ಸರ್ವೆ ನಂ.41 ರ ಆಸ್ತಿ ಕೆರೆ ಏರಿ ಹಿಂಭಾಗದಲ್ಲಿ ಇದೆ ಮತ್ತು ಅದು ನಿರಾವರಿ ಜಮೀನು. ದಾವಾ ಅನುಸೂಚಿ ಐಟಂ ನಂ.1 ಮತ್ತು 4 ನ್ನ ಪರಮೇಶ ಮತ್ತು ದಿನೇಶ ಇವರಿಗೆ ಕೊಟ್ಟಿದ್ದೇನೆ. ಪರಮೇಶ ಮತ್ತು ದಿನೇಶ ಇವರಿಗೆ ಆಸ್ತಿ ಹಂಚಿಕೊಟ್ಟ ಬಗ್ಗೆ ಬರವಣಿಗೆಯಾಗಿದೆಯಾ ಎಂದರೆ ಸಾಕ್ಷಿ ಆಸ್ತಿ ಕೊಟ್ಟ ಬಗ್ಗೆ ಯಾರ

ಸಂಬಂಧವೂ ಸಹ ಬರವಣಿಗೆಯಾಗಿಲ್ಲ ಎನ್ನುತ್ತಾರೆ. ದಾವಾ ಅನುಸೂಚಿ 1 ಮತ್ತು 4 ರ ಸಂಬಂಧ ಪರಮೇಶ ಮತ್ತು ದಿನೇಶ ಇವರ ಪರವಾಗಿ ಯಾವುದಾದರೂ ದಾಖಲೆ ಬರೆದಿರುತ್ತೀರಾ ಎಂದರೆ ಸಾಕ್ಷಿ ಅವರಿಗೆ ದಾನಪತ್ರ ಬರೆದಿದ್ದೇನೆ ಎನ್ನುತ್ತಾರೆ, ಸಾಕ್ಷಿ ಮುಂದುವರಿದು ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್ ನಲ್ಲಿ 1 ಲಕ್ಷ ಸಾಲ ಪಡೆದಿದ್ದೆ ಸದರಿ ಸಾಲವನ್ನ ಪರಮೇಶ ಮತ್ತು ದಿನೇಶ ತೀರಿಸಿದ್ದರಿಂದ ಅವರಿಗೆ ದಾನಪತ್ರ ಬರೆದಿದ್ದೇನೆ ಎನ್ನುತ್ತಾರೆ. ಪರಮೇಶ ಮತ್ತು ದಿನೇಶ  ಇವರ ಪರವಾಗಿ 2 ಪ್ರತ್ಯೇಕ ದಾನಪತ್ರ ಬರೆದಿದ್ದೇನೆ ಎಂದರೆ ಸರಿ. ದಾವಾ ಅನುಸೂಚಿ ಐಟಂ.ನಂ.1 ಮತ್ತು 4 ರ ಸಂಬಂಧ ನನ್ನ ಮಕ್ಕಳಿಗೆ ಸಮಾನ ಹಕ್ಕು ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ವಾದಿ ಮತ್ತು ಇತರ ಮಕ್ಕಳು ಸಾಲ ಕಟ್ಟಿದರೆ ಇವತ್ತೂ ಸಹ ದಾನಪತ್ರ ವಾಪಾಸ್ ಬರೆಸಿಕೊಡುತ್ತೇನೆ ಎನ್ನುತ್ತಾರೆ. ದಾನಪತ್ರದಲ್ಲಿ ನಾನು ಸಾಲ ಮಾಡಿದ್ದೆ ಆ ಸಾಲವನ್ನ ದಿನೇಶ  ಮತ್ತು ಪರಮೇಶ ತೀರಿಸಿದ್ದರಿಂದ ಹಾಗೂ ಇತರ ಮಕ್ಕಳು ಸಾಲ ವಹಿಸಿಕೊಳ್ಳದೇ ಇದ್ದುದರಿಂದ ದಾನಪತ್ರ ಬರೆಯುತ್ತಿದ್ದೇನೆ ಎಂದು ಬರೆದಿಲ್ಲ. ನಾನು ಚಿ.ಕೋ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆ ರೀತಿ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಲ್ಲಿ ಸಾಕಷ್ಟು ಆದಾಯ ಇತ್ತು ಮತ್ತು ಜೀವನ ನಿರ್ವಹಣೆ ಆಗಿ ಅದರಿಂದ ಬಂದ ಆದಾಯ ಉಳಿತಾಯವಾಗುತ್ತಿತ್ತು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯಲ್ಲಿ ಬಂದ ಉತ್ಪನ್ನದಿಂದಾಗಿ ದಾವಾ ಅನುಸೂಚಿ ಐಟಂ ನಂ.5 ನ್ನ ನನ್ನ ಪತ್ನಿ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ ಎಂದರೆ

ಸರಿಯಲ್ಲ. ಆ ಕಾರಣಕ್ಕಾಗಿ ಸದರಿ ಸ್ವತ್ತನ್ನೂ ಸಹ ಇತರ ಸ್ವತ್ತುಗಳೊಂದಿಗೆ ಸೇರಿಸಿ ಒಟ್ಟಾಗಿ ಸಾಗು ಮಾಡಿಕೊಂಡು ಬರುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಮಕ್ಕಳು ಅವರವರ ಜಮೀನನ್ನ ಅವರವರು ಮಾಡಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ. ಸಾಕ್ಷಿ ಮತ್ತೂ ಮುಂದುವರೆದು ದಾವಾ ಅನುಸೂಚಿ ಐಟಂ ನಂ.5 ನ್ನ ನನ್ನ ಹೆಂಡತಿ ಸಹೋದರರು ಮೊದಲು ಮಾಡಿಕೊಳ್ಳುತ್ತಿದ್ದರು ಇತ್ತೀಚೆಗೆ ಅದನ್ನ ನಮಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಪರಮೇಶ ಮತ್ತು ದಿನೇಶ ಇವರ ಹೆಸರಿಗೆ ದಾನಪತ್ರ ಬರೆಯುವ ಮೊದಲೇ ಚಿಕೋ ಬ್ಯಾಂಕ್ ನ ಸಾಲ ತೀರುವಳಿಯಾಗಿತ್ತು ಎಂದರೆ ಸರಿಯಲ್ಲ. ಚಿಕೋ ಬ್ಯಾಂಕ್ ನಲ್ಲಿ ಸಾಲ ಮಾಡುವ ದರ್ದು ನನಗೆ ಇರಲಿಲ್ಲ, ವಾದಿ ಮತ್ತು ತಮ್ಮೇಗೌಡ ಇವರಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಸಾಲ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಿಕೋ ಬ್ಯಾಂಕ್ ನಲ್ಲಿ ಸಾಲ ಪಡೆದ ಕಾಲಕ್ಕೆ ಗಂಗಾಧರೇಗೌಡ ಮತ್ತು ತಮ್ಮೇಗೌಡರ ಸಹಿಯನ್ನ ಸಾಲದ ಅರ್ಜಿಗಾಗಲೀ ಅಥವಾ ಇತರ ದಾಖಲೆಗಾಗಲೀ ಪಡೆದಿಲ್ಲ. ಸಾಕ್ಷಿ ಮುಂದುವರಿದು ಯಾವ ಮಕ್ಕಳ ಸಹಿ ಸಹ ಪಡೆದಿಲ್ಲ ಎನ್ನುತ್ತಾರೆ. ನಿಪಿ-9 ಮತ್ತು ನಿಪಿ-10 ನ್ನ ವಜಾಗೊಳಿಸಿ ನನ್ನ ಮಕ್ಕಳಿಗೆ ಆಸ್ತಿಯಲ್ಲಿ ಪಾಲು ಮಾಡಿಕೊಡುತ್ತೇನೆ ಎಂದು ನನ್ನ ವಕೀಲರಿಗೆ ಹೇಳಿದ್ದೆ. ಸಾಕ್ಷಿ ಮುಂದುವರಿದು ವಾದಿ ಮತ್ತು ತಮ್ಮೇಗೌಡ ತಮ್ಮ ಜವಬ್ದಾರಿಗೆ ಬರುವ ಸಾಲದ ಹಣ ಕೊಡಬೇಕು ಎನ್ನುತ್ತಾರೆ. ಈ ದಾವೆ ಹೂಡಿದ ಕಾಲಕ್ಕೆ ನನ್ನ ಕುಟುಂಬದ ಆಸ್ತಿ ಮೇಲೆ ಯಾವುದೇ ಸಾಲ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಕುಟುಂಬದ ಆಸ್ತಿಗಳ ಸಂಬಂಧ ಸಾಲ ಇದ್ದ ಬಗ್ಗೆ ನ್ಯಾಯಾಲಯದ ಮುಂದೆ ಯಾವುದೇ

ದಾಖಲೆ ಹಾಜರು ಮಾಡಿಲ್ಲ. ದಾಸರಹಳ್ಳಿ ಗ್ರಾಮದ ಸರ್ವೆ ನಂ.76 ರ ಆಸ್ತಿ ತಮ್ಮೇಗೌಡರ ಹೆಸರಿನಲ್ಲಿ ಮಂಜೂರಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನ ನಾನೇ ಆತನ ಹೆಸರಿಗೆ ಮಂಜೂರು ಮಾಡಿಸಿದ್ದು ಅದು ಪಿತ್ರಾರ್ಜಿತ ಆಸ್ತಿ ಎನ್ನುತ್ತಾರೆ. ನನ್ನ ಮಕ್ಕಳ ಪೈಕಿ ವಾದಿ ಹಿರಿಯವನು. ನಿಮ್ಮ ಕುಟುಂಬದ ವ್ಯವಹಾರವನ್ನ ಯಾರು ಮಾಡುತ್ತಿದ್ದರು ಎಂದರೆ ಸಾಕ್ಷಿ ವಾದಿ ಕುಟುಂಬದಲ್ಲಿ ಇದ್ದಾಗ ಆತ ಮಾಡುತ್ತಿದ್ದ ಆತ ಹಣ ಬಂದಾಗ ಅದನ್ನ ಎತ್ತಿಕೊಂಡು ಹೋದ ಆನಂತರ ನಾನು ಮಾಡುತ್ತಿದ್ದೇನೆ ಎನ್ನುತ್ತಾರೆ. ವಾದಿ ತನ್ನ ಮದುವೆಯಾಗುವವರೆಗೆ ಮನೆ ವ್ಯವಹಾರ ಮಾಡಿರುತ್ತಾನೆ. ವಾದಿಯ ವಿವಾಹವಾದ 3 ತಿಂಗಳಿಗೆ ಆತ ಮನೆ ಬಿಟ್ಟು ಹೋದ. ಆತನ ವಿವಾಹವಾಗಿ ಎಷ್ಟು ವರ್ಷವಾಗಿದೆ ಎಂದು ಈಗ ನನಗೆ ನೆನಪಿಲ್ಲ. ನಾನು ಮತ್ತು ನನ್ನ ಸಹೋದರರು ಹಿಸ್ಸೆ ಮಾಡಿಕೊಂಡ ಲಗಾಯತ್ತಿನಿಂದ ನಾನು ನನ್ನ ಕುಟುಂಬದ ವ್ಯವಹಾರ ಮಾಡುತ್ತಿದ್ದೇನೆ.  ಸರ್ವೆ ನಂ.76 ರ ಆಸ್ತಿಯನ್ನ ನಿಮ್ಮ ಹೆಸರಿಗೆ ಮಂಜೂರಾತಿ ಮಾಡಿಸಿಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ಹೆಸರಿಗೆ ಆಸ್ತಿ ಇದ್ದ ಕಾರಣ ಮಂಜೂರಾತಿ ಕೊಡಲಿಲ್ಲ ಎನ್ನುತ್ತಾರೆ. ಸದರಿ ಆಸ್ತಿಯನ್ನ ನನ್ನ ಎಲ್ಲಾ ಮಕ್ಕಳ ಹೆಸರಿಗೆ ಜಂಟಿ ಮಂಜೂರಾತಿ ಮಾಡಿಸಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಅದು ನನಗೆ ತಲೆಗೆ ಬಂದಿರುವುದಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಇದೇ ಸರ್ವೆ ನಂಬರ್ ನಲ್ಲಿ ನನ್ನ ಅಣ್ಣಂದಿರು ಅವರ ಒಬ್ಬೊಬ್ಬ ಮಗನ ಹೆಸರಿಗೆ ಮಾಡಿಸಿ ಅದನ್ನ ಹಂಚಿಕೊಂಡಿರುತ್ತಾರೆ  ಎನ್ನುತ್ತಾರೆ, ಮಂಜೂರಾತಿ ಕಾಲಕ್ಕೆ ಸರ್ಕಾರಕ್ಕೆ ಹಣ ಕಟ್ಟಬೇಕು ಎಂದರೆ ಸರಿ. ಮಂಜೂರಾತಿ ಬಾಬ್ತು ಹಣ ಕಟ್ಟಿದ ಸಂಬಂಧ ನನ್ನ

ಬಳಿ ಯಾವುದೇ ದಾಖಲೆ ಇಲ್ಲ. ಸರ್ವೆ ನಂ.76 ರ ಆಸ್ತಿ ತಮ್ಮೇಗೌಡರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ನಿಡಿ-11 ರಲ್ಲಿ ಇರುವ ಆಸ್ತಿಯನ್ನ ನನ್ನ ಮಕ್ಕಳಿಗೆ ಹಂಚಿಕೊಟ್ಟಿದ್ದೇನೆ. ಸದರಿ ದಾಖಲೆಯಲ್ಲಿ ತೋರಿಸಿರುವ ಆಸ್ತಿಯನ್ನ ನನ್ನ ಎಲ್ಲಾ ಗಂಡು ಮಕ್ಕಳು ಹಂಚಿಕೊಂಡಿರುತ್ತಾರೆ. ನಿಡಿ-11 ರಲ್ಲಿ ಇರುವ ಆಸ್ತಿಗಳು ಆಯಾ ಖಾತಾದಾರರ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ಸರ್ವೆ ನಂ.76 ರ ಆಸ್ತಿ ಕಂದಾಯ ಪಾವತಿ ಮಾಡದೇ ಇದ್ದುದರಿಂದ ಅದನ್ನ ಸರ್ಕಾರಿ ಬೀಳು ಎಂದು ಘೋಷಿಸಿದ್ದರಿಂದ ತಮ್ಮೇಗೌಡರು ಸರ್ಕಾರಕ್ಕೆ ಶುಲ್ಕ ಪಾವತಿ ಮಾಡಿ ಅದನ್ನ ಸ್ವಂತ ಮಂಜೂರು ಮಾಡಿಕೊಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.76 ರ ಆಸ್ತಿ ತುಂಬಾ ಹಿಂದೆ ಸರ್ಕಾರಿ ಬೀಳು ಎಂದು ದಾಖಲಾಗಿತ್ತು ಎಂದರೆ ಸರಿ. ದಾವಾ ಅನುಸೂಚಿ ಐಟಂ ನಂ.1 ರಿಂದ 5 ರ ಮೇಲೆ ವಾದಿ, 1 ರಿಂದ 6 ನೇ ಪ್ರತಿವಾದಿರವರಿಗೆ ಹಿಸ್ಸಾ ಆಗುವ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸರ್ವೆ ನಂ.67 ನ್ನ ಹೊರತುಪಡಿಸಿ ಉಳಿದೆಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಮತ್ತು ಅವುಗಳನ್ನ ಹಂಚಿಕೊಳ್ಳಬಹುದು ಎನ್ನುತ್ತಾರೆ. ವಾದಿಗೆ 90 ಸಾವಿರ ರೂಪಾಯಿ ಹಣ ಕೊಟ್ಟಿದ್ದೇನೆ ಎಂದು ಹೇಳಲಾದ ಸಂಬಂಧ ಯಾವುದೇ ದಾಖಲೆ ಇಲ್ಲ, ಸಾಕ್ಷಿ ಮುಂದುವರಿದು ಪಂಚಾಯಿತಿದಾರರ ಸಮಕ್ಷಮದಲ್ಲಿ ಹಣ ಕೊಟ್ಟಿದ್ದೇನೆ ಎನ್ನುತ್ತಾರೆ. ವಾದಿಗೆ 90 ಸಾವಿರ ರೂಪಾಯಿ ಹಣ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಚಿಕೋ ಬ್ಯಾಂಕ್ ನಲ್ಲಿ ಬಡ್ಡಿ ಸೇರಿಸಿ 4 ಲಕ್ಷ ರೂಪಾಯಿ ಸಾಲ ಬಾಕಿ ಇತ್ತು ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಚಿಕೋ ಬ್ಯಾಂಕ್ ನಲ್ಲಿ ಒಟ್ಟು

ಕುಟುಂಬದ ಅನುಕೂಲಕ್ಕಾಗಲೀ ಮತ್ತು ಒಟ್ಟು ಕುಟುಂಬದ ಯಾವುದೇ ಅವಶ್ಯಕತೆಗಾಗಲೀ ಸದರಿ ಸಾಲವನ್ನ ಮಾಡಿಲ್ಲ ಎಂದರೆ ಸರಿಯಲ್ಲ. ಚಿಕೋ ಬ್ಯಾಂಕ್ ನಲ್ಲಿ ಸಾಲ ಪಡೆದ ಕಾಲಕ್ಕೆ ನನ್ನ ಮಕ್ಕಳೆಲ್ಲಾ ಪ್ರಾಪ್ತ ವಯಸ್ಕರಾಗಿದ್ದರು. ಸಾಕ್ಷಿ ಮುಂದುವರಿದು ಬ್ಯಾಂಕ್ ನಲ್ಲಿ ಸಾಲ ಪಡೆದೇ ದನ ಮತ್ತು ಎಮ್ಮೆಗಳನ್ನ ಖರೀದಿ ಮಾಡುವುದು ಮಾಡುತ್ತಿದ್ದೆ ಎನ್ನುತ್ತಾರೆ. ಚಿಕೋ ಬ್ಯಾಂಕ್ ನಲ್ಲಿ 2 ರಿಂದ 3 ವರ್ಷಗಳಿಗೊಮ್ಮೆ ಸಾಲ ಮಾಡುತ್ತಿದ್ದೆ. ಚಿಕೋ ಬ್ಯಾಂಕ್ ನಲ್ಲಿ ಕುಟುಂಬದ ಅವಶ್ಯಕತೆಗಾಗಿ ಸಾಲ ಮಾಡಿದ್ದರೆ ನನ್ನ ಮಕ್ಕಳಿಂದಲೂ ಸಹ ಸಹಿ ಪಡೆಯುತ್ತಿದ್ದೆ ಎಂದರೆ ಸಾಕ್ಷಿ ಖಾತೆ ನನ್ನ ಹೆಸರಿನಲ್ಲಿ ಇತ್ತು ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಜಮೀನು ಮಟ್ಟ ಮಾಡಿಸಿ ಬೇಲಿ ಹಾಕಿಸಿದ್ದೇನೆ ಎನ್ನುತ್ತಾರೆ. ಪರಮೇಶ ಮತ್ತು ದಿನೇಶನ ಚಿತಾವಣೆ ಮೇರೆಗೆ ಚಿಕೋ ಬ್ಯಾಂಕ್ ನಲ್ಲಿ ಸಾಲ ಪಡೆದು ಅವರ ಹೆಸರಿಗೆ 2 ಒಳ್ಳೆ ಜಮೀನುಗಳನ್ನ ದಾನಪತ್ರದ ಮುಖಾಂತರ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು ನಿಪಿ-10 ರ ದಾನಪತ್ರ ಬರೆಯಲು ನನಗೆ ಯಾವುದೇ ರೀತಿ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.1 ಮತ್ತು 4 ರ ಆಸ್ತಿಗಳು ಒಟ್ಟು ಕುಟುಂಬದ ಸುಪರ್ದಿಯಲ್ಲಿಯೇ ಇದೆ. ಕುಟುಂಬದ ಕರ್ತನಾಗಿ ಕುಟುಂಬದ ಎಲ್ಲಾ ಸದಸ್ಯರಿಗೆ ಕಾನೂನುಬದ್ಧವಾಗಿ ದಸ್ತಾವೇಜು ಬರೆದು ಹಿಸ್ಸೆ ಕೊಡಲು ನಿಮಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಸಾಲಕ್ಕೆ ತೊಂದರೆ ಇತ್ತು ಎನ್ನುತ್ತಾರೆ. ಸಾಲ ಇದ್ದಿದ್ದೇ ಆಗಿದ್ದರೆ ವಿಭಾಗ ಪತ್ರದ ಮುಖಾಂತರ ಸಾಲವನ್ನೂ ಸಹ ಹಂಚಬಹುದಾಗಿತ್ತು ಎಂದರೆ ಸಾಕ್ಷಿ ಆ ರೀತಿ ಮಾಡಬೇಕು ಎಂದು ನನಗೆ ಬುದ್ದಿ ಒಳೆದಿರುವುದಿಲ್ಲ ಎನ್ನುತ್ತಾರೆ. ವಾದಿ ಮತ್ತು ತಮ್ಮೇಗೌಡರಿಗೆ ಮೋಸ

ಮಾಡಬೇಕೆಂಬ ಉದ್ದೇಶದಿಂದ ದಾಖಲೆಗಳನ್ನ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಮತ್ತು ತಮ್ಮೇಗೌಡರಿಗೆ ಆಸ್ತಿ ಹಂಚಿಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ವಾದಿ ಚಿಕ್ಕಮಗಳೂರು ನಗರದಲ್ಲಿ ವಾಸವಿದ್ದಾರೆ. ಸಾಕ್ಷಿ ಮುಂದುವರಿದು ವಾದಿಗೆ ಪ್ರತ್ಯೇಕ ನಿವೇಶನ ಕೊಟ್ಟಿದ್ದೇನೆ ಮತ್ತು ತಾನು ನಿವೇಶನ ಖರೀದಿ ಮಾಡುತ್ತೇನೆ ಎಂದು ನನ್ನಿಂದ ಹಣ ಪಡೆದುಕೊಂಡು ಹೋಗಿದ್ದ ಎನ್ನುತ್ತಾರೆ. ವಾದಿ ಹಣ ಪಡೆದುಕೊಂಡು ಹೋದ ಎಂದು ಹೇಳಲಾದ ಕಾಲಕ್ಕೆ ಆತ ನನ್ನ ಜೊತೆ ವಿಶ್ವಾಸದಿಂದ ಇದ್ದ. ಹಣ ಕೊಟ್ಟಿದ್ದೇನೆ ಎಂದು ಹೇಳಲಾದ ಕಾಲಕ್ಕೆ ವಾದಿಯಿಂದ ನಿವೇಶನ ಮತ್ತು ಹಣ ಕೊಟ್ಟ ಬಾಬ್ತು ಬರೆಸಿಕೊಳ್ಳಲು ನನಗೇನೂ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರಿದು ಆ ರೀತಿ ಬರೆಸಿಕೊಳ್ಳಲು ನನಗೆ ತಲೆ ಓಡಿರುವುದಿಲ್ಲ ಎನ್ನುತ್ತಾರೆ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ

ಓ.ಎಸ್.ನಂಃ 60/2022
ಡಿ.ಡಬ್ಲ್ಯೂಃ 1